## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS- 95/2014** **DW-1**

**ದಿಃ 28.06.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ ಎಸ್ ಬಿ ವಕೀಲರಿಂದಃ**

**1.** ವಾದಿಯು ನನ್ನ ಮಗಳಾಗಿರುತ್ತಾಳೆ. ಈ ಪ್ರಕರಣವನ್ನು ವಾದಿಯು ಹಣ ಬೇಕೆಂದು ಮಾಡಿರುತ್ತಾರೆ. ನನ್ನ ಹೆಸರಿನಲ್ಲಿ ಗೃಹ ಪೈನಾನ್ಸನಲ್ಲಿ ಯಾವದೇ ಸಾಲ ಇರಲಿಲ್ಲ ಸಾಕ್ಷಿಯು ಮುಂದುವರೆದು ನನ್ನ ಮಕ್ಕಳ ಹೆಸರಿನಲ್ಲಿದ್ದು ಅದನ್ನು ನಾನು ತೀರಿಸಿರುತ್ತೇನೆಂದು ನುಡಿಯುತ್ತಾರೆ. ತಮ್ಮ ಮೇಲೆ ಬೆಂಗಳೂರಿನ ಡಿ ಆರ್ ಟಿ ನ್ಯಾಯಾಲಯದಲ್ಲಿ ಗೃಹ ಪೈನಾನ್ಸನವರು ಹಣ ವಸೂಲಾತಿಗಾಗಿ ಕೇಸನ್ನು ಮಾಡಿದ್ದರು ಎಂದರೆ ಸರಿ. ನನ್ನ ಇಬ್ಬರು ಗಂಡು ಮಕ್ಕಳ ಹೆಸರು ಆನಂದ ಮತ್ತು ರಮೇಶ ಜಡಿ ಎಂದರೆ ಸರಿ. ಇವರುಗಳು ಕೋಟಕೆ ಮಹೀಂದ್ರಾ ಬ್ಯಾಂಕನಲ್ಲಿ ಸಾಲ ಮಾಡಿದ್ದರು ಎಂದರೆ ಗೊತ್ತಿಲ್ಲ. ತಮ್ಮ ಇಬ್ಬರು ಗಂಡು ಮಕ್ಕಳು ತಮ್ಮ ಜೊತೆಯಲ್ಲಿ ಇರುತ್ತಾರೆಂದರೆ ಸಾಕ್ಷಿಯು ಮೇಲೆ ಅವರು ಇದ್ದು ಒಟ್ಟಾಗಿ ಇರುವುದಿಲ್ಲ ಎನ್ನುತ್ತಾರೆ. ತಾವು ಮೂರು ಪ್ರಕರಣಗಳಲ್ಲಿ ತಮ್ಮ ಪರವಾಗಿ ಹಾಜರಾಗಲು ಒಟ್ಟುಮೊಕ್ತಿಯಾರ ಪತ್ರವನ್ನು ಆನಂದ ಜಡಿಯವರಿಗೆ ಬರೆದುಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಡಿ 1 ನ್ನು ತೋರಿಸಿ ಅದರಲ್ಲಿರುವ ಸಹಿ ಯಾರದು ಎಂದು ಕೇಳಲಾಗಿ ಅದು ತನ್ನದೇ ಎಂದು ನುಡಿಯುತ್ತಾರೆ. ಸದರಿ ಸಹಿಗಳನ್ನು ಒಟ್ಟಾಗಿ ನಿಪಿ 1 ಎ ಮತ್ತು 1 ಬಿ ಎಂದು ಗುರುತಿಸಲಾಯಿತು. ತಾವು ಯಾವದೇ ಪತ್ರಕ್ಕೆ ಅಥವಾ ತಮ್ಮ ಮಕ್ಕಳು ಸಹಿ ಮಾಡು ಎಂದು ಕೇಳಿದ ಪತ್ರಕ್ಕೆ ತಾವು ಓದಿಸಿ ಅಥವಾ ಓದಿ ತಿಳಿದುಕೊಂಡು ಸಹಿ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು ನಾನು ಯಾವದೇ ಸಹಿಗಳನ್ನು ಮಾಡಿಕೊಟ್ಟಿಲ್ಲ ಎಂದು ಹೇಳುತ್ತಾರೆ. ಬೆಂಗಳೂರಿನ ಡಿ ಆರ್ ಟಿ ಯಲ್ಲಿ ಪ್ರಕರಣವನ್ನು ಪ್ರಸ್ತುತ ಪ್ರಕರಣದ ವಾದಿ ಮತ್ತು ಅವರ ಗಂಡ ಚಂದ್ರಕಾಂತ ರವರು ನಡೆಸುತ್ತಿದ್ದರು.

2. ನನ್ನ ಇಬ್ಬರು ಗಂಡು ಮಕ್ಕಳಾದ ಆನಂದ ಮತ್ತು ರಮೇಶ ಜಡಿ ಈಗ ಯಾವದೇ ಕೆಲಸ ಮಾಡುತ್ತಿಲ್ಲ. ಈ ವ್ಯಕ್ತಿಗಳು ಸುಮಾರು 15-16 ವರ್ಷದಿಂದ ಯಾವದೇ

ವ್ಯವಹಾರ ಮಾಡುತ್ತಿಲ್ಲ ಎಂದರೆ ನೆನಪಿಲ್ಲ ಈಗ ಏನೂ ಕೆಲಸ ಮಾಡುತ್ತಿಲ್ಲ ಎನ್ನುತ್ತಾರೆ. ತಮ್ಮ ಗಂಡ 2002 ರಲ್ಲಿ ಮರಣ ಹೊಂದಿರುತ್ತಾರೆಂದರೆ ಸಾಕ್ಷಿಯು ಅಷ್ಟು ವರ್ಷ ಆಗಿಲ್ಲ ಈ ಬಗ್ಗೆ ದಾಖಲೆ ಇದೆ ಎನ್ನುತ್ತಾರೆ. ತಮ್ಮ ಗಂಡ ಬದುಕಿದ್ದಾಗ ವ್ಯಹಾರ ಮಾಡುತ್ತಿದ್ದರು ಮತ್ತು ಅದರಲ್ಲಿ ನಷ್ಟವನ್ನು ಅನುಭವಿಸಿದ್ದರು ಎಂದರೆ ಸರಿ ಸಾಕ್ಷಿಯು ಮುಂದುವರೆದು ಎಲ್ಲಾರೂ ತಿಂದಿದ್ದರು ಎನ್ನುತ್ತಾರೆ. ನನ್ನ ಗಂಡ ಬದುಕಿದ್ದಾಗಲೇ ನನ್ನ ಮತ್ತೊಬ್ಬ ಮಗನಾದ ರಾಜೇಶ ಜಡಿಯವರು ಬೇರೆಯಾಗಿರುತ್ತಾರೆ. ಆತ ಬೇರೆ ಇರುವ ಕಾರಣ ಆತನ ಜೊತೆ ನಮಗೆ ಕೊಡುವ ತೆಗೆದುಕೊಳ್ಳುವ ಯಾವದೇ ವ್ಯವಹಾರ ಇರಲಿಲ್ಲ. ತಮ್ಮ ಗಂಡ ಬದುಕಿದ್ದಾಗ ಸಾಕಷ್ಟು ಬ್ಯಾಂಕಗಳಲ್ಲಿ ಸಾಲ ಮಾಡಿದ್ದರು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಹಾಗೂ ಈ ಬಗ್ಗೆ ತನ್ನ ಗಂಡ ತನಗೆ ತಿಳಿಸಿರಲಿಲ್ಲ ಎನ್ನುತ್ತಾರೆ.

3. ಅನಂತರಾಮ ರಾಯ್ಡು ರವರು ತಮ್ಮ ಗಂಡನ ಮೇಲೆ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಆ ಪ್ರಕರಣದಲ್ಲಿ ತಮ್ಮ ಗಂಡ ಮರಣದ ನಂತರ ಅವರ ವಾರಸಾದಾರರಾಗಿ ತಮ್ಮನ್ನು ಮತ್ತು ತಮ್ಮ ಮಕ್ಕಳನ್ನು ಪಕ್ಷಗಾರರಾಗಿ ಮಾಡಿರುತ್ತಾರೆಂದರೆ ಸರಿಯಲ್ಲ. ತಮ್ಮ ಗಂಡನ ಮೇಲೆ ಎಷ್ಟು ಪ್ರಕರಣಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಅನಂತರಾಮ ರಾಯ್ಡು ರವರು ಮಾಡಿದ ಪ್ರಕರಣ ಇನ್ನೂ ಚಾಲ್ತಿಯಲ್ಲಿರುತ್ತದೆ ಎಂದರೆ ಗೊತ್ತಿಲ್ಲ. ತಮ್ಮ ಮಕ್ಕಳಾದ ರಮೇಶ ಮತ್ತು ಆನಂದ ಜಡಿಯವರು ದಿವಾಳಿಯಾಗಿರುತ್ತೇವೆಂದು ತಿಳಿಸಿ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಕೋರ್ಟಿನ ವಿಚಾರ ಯಾವದರೂ ತಿಳಿಸುತ್ತಿರಲಿಲ್ಲ ಎನ್ನುತ್ತಾರೆ. ನ್ಯಾಯಾಲಯವು ಅವರನ್ನು ದಿವಾಳಿಕೋರರೆಂದು ಆದೇಶ ಮಾಡಿರುತ್ತಾರೆಂದರೆ ಗೊತ್ತಿಲ್ಲ. ಈಗ ನನ್ನ ಹೆಸರಿನಲ್ಲಿ ಇರುವ ಆಸ್ತಿ ಎಂದರೆ ನಾನು ವಾಸವಾಗಿರುವ ಮನೆ ಮಾತ್ರ ಎಂದರೆ ಸರಿ. ತಮ್ಮ ಹೆಸರಿನಲ್ಲಿ ಇಲ್ಲಿಯವರೆಗೂ ಯಾವದೇ ವೈಯಕ್ತಿಕವಾದ ವ್ಯವಹಾರ ಇರುವದಿಲ್ಲ ಎಂದರೆ ನೆನಪಿಲ್ಲ. ತಮ್ಮ ಹೆಸರಿನಲ್ಲಿ ಯಾವದೇ ಅಂಗಡಿ ಇರುವದಿಲ್ಲ ಎಂದರೆ ಸಾಕ್ಷಿಯು ಅಮರಗೋಳದಲ್ಲಿ ಒಂದು ಅಂಗಡಿ ಇತ್ತು ಎಂದು ನುಡಿಯುತ್ತಾರೆ. ಆ ಅಂಗಡಿಯಲ್ಲಿ ತಾವು ಎಂದಿಗೂ ವೈಯಕ್ತಿಕವಾಗಿ ವ್ಯವಹಾರ ಮಾಡಿಲ್ಲ ಎಂದರೆ ಸಾಕ್ಷಿಯು ಈಗ ಬಂದು ಮಾಡಿದ್ದು ಈ ಹಿಂದೆ ಆಗಾಗ ಹೋಗಿ ವ್ಯವಹಾರ ಮಾಡುತ್ತಿದ್ದೆ ಎನ್ನುತ್ತಾರೆ. ತಮ್ಮ ಹೆಸರಿನಲ್ಲಿ ವ್ಯವಹಾರ ನಡೆಸಲಾಗುತ್ತಿತ್ತು ಎಂದು ತೋರಿಸಲು ಯಾವದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಗೊತ್ತಿಲ್ಲ. ನಾನು ಆದಾಯ ತೆರಿಗೆ ಪಾವತಿದಾರಳಾಗಿರುತ್ತೇನೆ. ನಮ್ಮ ವಕೀಲರು ತಿಳಿಸಿರುವ ರೀತಿ ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ ಯಾವ ವರ್ಷದಲ್ಲಿ ಕಟ್ಟಿರುತ್ತೇನೆಂದು ಗೊತ್ತಿಲ್ಲ. ಈ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ನನ್ನ

ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ. ನನ್ನ ಆದಾಯ ತೆರಿಗೆಯನ್ನು ಕಬಾಡಿ ಎನ್ನುವ ವಕೀಲರು ತುಂಬುತ್ತಾರೆ. ಸಾಕ್ಷಿಗೆ ಲಿಖಿತ ಹೇಳಿಕೆಯ ಜೊತೆಗೆ ಸಲ್ಲಿಸಿದ ಪ್ರಮಾಣ ಪತ್ರವನ್ನು ತೋರಿಸಿ ಅದರಲ್ಲಿ ತಾವು ತಮ್ಮ ಉದ್ಯೋಗ ಮನೆಕೆಲಸ ಎಂದು ತೋರಿಸಿರುತ್ತೀರಿ ಎಂದರೆ ಸರಿ.

4. ಗೃಹ ಪೈನಾನ್ಸನವರು ಎಷ್ಟನೇ ಇಸ್ವಿಯಲ್ಲಿ ನನ್ನ ಮೇಲೆ ಪ್ರಕರಣ ಮಾಡಿದ್ದರು ಎಂಬುದು ನೆನಪಿಲ್ಲ. ಗೃಹ ಪೈನಾನ್ಸನವರು ಮಾಡಿದ್ದ ಪ್ರಕರಣದಲ್ಲಿ ತಮಗೆ ಆದಾಯ ಇತ್ತು ಎಂದು ತೋರಿಸಲು ಯಾವದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಬೆಂಗಳೂರಿನಲ್ಲಿ ಅವರ ಕುಟುಂಬದೊಂದಿಗೆ ವಾಸವಾಗಿರುತ್ತಾರೆಂದರೆ ಸರಿ. ತಮ್ಮ ಅಳಿಯ ಎಲೆಕ್ಟ್ರಾನಿಕ ಇಂಜನೀಯರ ಎಂದರೆ ಸರಿ. ತಮ್ಮ ಅಳಿಯನಿಗೆ ಸೇರಿದ ಸ್ವಂತ ಮನೆ ಬೆಂಗಳೂರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅವರ ಅಪ್ಪ ಅಮ್ಮ ಮಾಡಿದ ಮನೆ ಎಂದು ನುಡಿಯುತ್ತಾರೆ. ಅವರು ಆರ್ಥಿಕವಾಗಿ ಸದ್ರೃಢರು ಎಂದರೆ ಸಾಕ್ಷಿಯು ಅಷ್ಟೇನೂ ಇಲ್ಲ ಎನ್ನುತ್ತಾರೆ. ಅವರು ನನ್ನ ಪ್ರಕಾರ ಮದ್ಯಮ ವರ್ಗದವರಾಗಿರುತ್ತಾರೆ. ತಮಗಿಂತ ತಮ್ಮ ಅಳಿಯ ಆರ್ಥಿಕವಾಗಿ ಸಬಲರಾಗಿರುತ್ತಾರೆಂದರೆ ಸಾಕ್ಷಿಯು ಅದನ್ನು ಯಾವ ರೀತಿ ಹೇಳಲಾಗುತ್ತದೆ ಎಂದು ಹೇಳುತ್ತಾರೆ. ಗೃಹ ಪೈನಾನ್ಸನವರು ಮಾಡಿದ ಸಾಲವನ್ನು ತುಂಬಲು ತಮ್ಮ ಬಳಿ ಯಾವದೇ ಆದಾಯದ ಮೂಲ ಇರಲಿಲ್ಲ ಎಂದರೆ ಸಾಕ್ಷಿಯು ಬೇರೆಯವರ ಕಡೆಗೆ ಬೇಡಿ ತುಂಬಿರುತ್ತೇನೆಂದು ನುಡಿಯುತ್ತಾರೆ. ತಾವು ವಾಸಮಾಡುತ್ತಿರುವ ಮನೆಯು ಗೃಹ ಪೈನಾನ್ಸನವರ ಬಳಿ ಮಾಡಿದ ಸಾಲಕ್ಕೆ ಸಂಬಂದಿಸಿದಂತೆ ಹರಾಜಗೆ ಬಂದಿತ್ತು ಎಂದರೆ ಸರಿ. ಆ ಸಮಯದಲ್ಲಿ ತಮ್ಮ ಸಹಾಯಕ್ಕೆ ಬಂದವರು ವಾದಿ ಮತ್ತು ಅವರ ಗಂಡ ಎಂದರೆ ಸರಿಯಲ್ಲ. ತಮಗೆ ತಮ್ಮ ಅಳಿಯಂದಿರು ಸಾಲ ಮರುಪಾವತಿಸಲು ಹಣವನ್ನು ನೀಡಿರುತ್ತಾರೆಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾನೇ ಅವರಿಗೆ ನೀಡಿದ್ದು ಅದನ್ನು ಅವರು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಇದಕ್ಕೆ ಸಂಬಂದಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ತಾವು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳಲ್ಲಿನ ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡಿ ಹಾಜರು ಪಡಿಸಿರುತ್ತೀರಿ ಎಂದರೆ ಸಾಕ್ಷಿಯು ನಾನು ವಿಶ್ವಾಸದಿಂದ ಸಹಿ ಮಾಡಿ ನೀಡಿರುತ್ತೇನೆ ಎನ್ನುತ್ತಾರೆ. ತಾವು ಯಾವದೇ ದಾಖಲೆಗೆ ಸಹಿ ಮಾಡಬೇಕಾದರೂ ಓದಿಸಿ ತಿಳಿದುಕೊಂಡು ಸಹಿ ಮಾಡುವ ಪ್ರವೃತ್ತಿ ಇರುತ್ತದೆ ಎಂದರೆ ಸಾಕ್ಷಿಯು ಕೆಲವೊಂದು ದಾಖಲೆಗೆ ವಿಶ್ವಾಸದಿಂದ ಸಹಿ ಮಾಡಿರುತ್ತೇನೆ ಮತು ಕೆಲವು ದಾಖಲೆಗಳಿಗೆ ಓದಿಸಿ ತಿಳಿದುಕೊಳ್ಳದೇ ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಈಗ ವಕೀಲರು ಯಾವದೇ ಕಾಗದ ಪತ್ರಕ್ಕೆ ನನ್ನ

ಸಹಿ ಪಡೆಯಬೇಕಾದರೂ ಅದರಲ್ಲಿರುವ ಅಂಶಗಳನ್ನು ತಿಳಿಸಿ ಸಹಿ ಪಡೆಯುತ್ತಿದ್ದು ಈ ಹಿಂದೆ ಈ ರೀತಿ ಆಗುತ್ತಿರಲಿಲ್ಲ ಮತ್ತು ಮಾಡುತ್ತಿರಲಿಲ್ಲ. ಸಾಕ್ಷಿಗೆ ನಿಪಿ 2 ನ್ನು ತೋರಿಸಿ ಅದರಲ್ಲಿರುವ ಸಹಿ ತಮ್ಮದೇ ಅಂದರೆ ಸಾಕ್ಷಿಯು ಅದನ್ನು ನೋಡಿ ನಾನು ಸಹಿಯನ್ನು ಮಾಡೇ ಇಲ್ಲ ಎಂದು ನುಡಿಯುತ್ತಾರೆ. ನಿಪಿ 2 ರಲ್ಲಿರುವ ಸಹಿ ನನ್ನದಲ್ಲ ಎಂದು ಹೇಳಿ ನನ್ನ ಮಗಳ ಮೇಲೆ ಯಾವದೇ ಕ್ರಿಮಿನಲ್ಲ ಪ್ರಕರಣ ದಾಖಲಿಸಿಲ್ಲ. ತಮ್ಮ ಮೇಲೆ ತಮ್ಮ ಮಗಳು ರೂ.19,40,000-00 ಗಳು ಬರಬೇಕೆಂದು ಹೇಳಿ ಕೇಸನ್ನು ಮಾಡಿರುತ್ತಾರೆಂದರೆ ಸರಿ. ನನ್ನ ವಕೀಲರು ಈ ಹಣವನ್ನು ವಾದಿಗೆ ನೀಡಿದ ಬಗ್ಗೆ ದಾಖಲೆಯನ್ನು ನೀಡಿರುತ್ತಾರೆ. ಯಾವ ದಿನಾಂಕದಂದು ಹಣವನ್ನು ವಾಪಸು ಮಾಡಿರುತ್ತೀರಿ ಎಂದರೆ ಸಾಕ್ಷಿಯು ತಾರೀಖು ಗೊತ್ತಾಗುವದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ನಿಡಿ 2 ರಿಂದ 8 ರಲ್ಲಿ ತಮ್ಮ ಸಹಿ ಇರುವದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನೇ ಹಣವನ್ನು ನೀಡಿ ತುಂಬಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ 2 ರಿಂದ 8 ಯಾವ ದಿನಾಂಕಕ್ಕೆ ಸಂಬಂದಿಸಿದ್ದು ಎಂದು ನನಗೆ ಗೊತ್ತಾಗುವದಿಲ್ಲ. ಆ ಹಣವನ್ನು ನನ್ನ ಹೆಸರಿಗೆ ಜಮಾ ಮಾಡಿರುತ್ತೇನೆ. ತಾವು ದಿ ః 04.02.2012 ರಲ್ಲಿ ವಾದಿ ಕಡೆಯಿಂದ ಹಣವನ್ನು ಸಾಲವಾಗಿ ಪಡೆದಿರುತ್ತೀರಿ ಎಂದರೆ ಸಾಕ್ಷಿಯು ನಾನು ಸಾಲ ಪಡೆದಿಲ್ಲ ಬದಲಿಗೆ ಸಾಲ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ಈ ಬಗ್ಗೆ ಯಾವದಾದರೂ ಕಾಗದ ಪತ್ರವನ್ನು ವಾದಿಯು ಬರೆದುಕೊಟ್ಟಿರುತ್ತಾರೆಂದರೆ ಸಾಕ್ಷಿಯು ವಾದಿ ಬರಕೊಟ್ಟಿಲ್ಲ ಅವರ ಮನೆಯವರು ಬರೆದುಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಯಾವ ದಿನಾಂಕದಂದು ಈ ರೀತಿ ಪತ್ರವನ್ನು ಬರೆದುಕೊಡಲಾಗಿರುತ್ತದೆ ಎಂಬುದು ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಬ್ಯಾಂಕ ರಶೀದಿಗಳು ನನ್ನ ಖಾತೆಗೆ ಜಮಾ ಮಾಡಿ ಹಣದ ರಶೀದಿಗಳಾಗಿರುತ್ತವೆ. ನಿಡಿ 15 ರಿಂದ 21 ರಲ್ಲಿ ತಮ್ಮ ಸಹಿ ಇರುವದಿಲ್ಲ ಎಂದರೆ ಸರಿ. ಹಣವನ್ನು ವಾದಿಯ ಗಂಡನ ಹಸರಿನ ಖಾತೆಗೆ ಜಮಾ ಮಾಡಿರುತ್ತೇನೆ.

5. ತಮ್ಮ ಇಬ್ಬರು ಗಂಡು ಮಕ್ಕಳಾದ ಆನಂದ ಮತ್ತು ರಮೇಶ ಜಡಿ ಯವರು ನ್ಯಾಯಾಲಯದಿಂದ ದಿವಾಳಿಗಾರರೆಂದು ತೀರ್ಮಾನವಾದ ನಂತರ ರಮೇಶ ರವರ ಹೆಂಡತಿಯಾದ ಪ್ರೀಯಾ ಅಲಿಯಾಸ ವಿಜಯಲಕ್ಷ್ಮಿ ರವರ ಹೆಸರಿನಲ್ಲಿ ಜೈ ಅಂಬೇ ಟ್ರೇಡರ್ಸ ನಾಮೇ ಮೇಲೆ ವ್ಯವಹಾರವನ್ನು ಆರಂಬಿಸಿದರು ಸರಿ. ಆ ಟ್ರೇಡರ್ಸ ಬಾಡಿಗೆ ಅಂಗಡಿಯಲ್ಲಿ ಇತ್ತು ಎಂದರೆ ಗೊತ್ತಿಲ್ಲ. ಹುಬ್ಬಳ್ಳಿಯ ಹಿರೇಪೇಟೆಯಲ್ಲಿ ಚಂದ್ರಕಾಂತ ರವರ ಸ್ವಂತ ಅಂಗಡಿ ಇತ್ತು ಎಂದರೆ ಸಾಕ್ಷಿಯು ಆ ಅಂಗಡಿಗೋಸ್ಕರನೇ ಹತ್ತು ಲಕ್ಷ ನೀಡಿರುತ್ತೇನೆಂದು ನುಡಿಯುತ್ತಾರೆ. ಸದರಿ ಅಂಗಡಿಯು ಅವರ ಸ್ವಂತ ಅಂಗಡಿ ಆಗಿತ್ತು ಎಂದರೆ ಸರಿ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿರುವ ಅಂಗಡಿಯು ಸದರಿ ಅಂಗಡಿ ಎಂದರೆ

ಸಾಕ್ಷಿಯು ಹೌದು ಎನ್ನುತ್ತಾರೆ. ಈಗ ಇದರ ಭಾವಚಿತ್ರದ ಸಿಡಿ ಅಥವಾ ನಕಲು ಇರದ ಕಾರಣ ಅದನ್ನು ಹಾಜರುಪಡಿಸಿದ ನಂತರ ನಿಶಾನೆಯಾಗಿ ಗುರುತಿಸಲು ಆದೇಶಿಸಲಾಯಿತು. ಸದರಿ ಭಾವಚಿತ್ರದಲ್ಲಿ ಅಂಗಡಿಯಲ್ಲಿ ಜೈಅಂಬೇ ಟ್ರೇಡರ್ಸ ಅಂಗಡಿ ಇತ್ತು ಎಂದರೆ ಸರಿ. ತಮ್ಮ ಸೊಸೆಯು ಬಾಡಿಗೆನಾತೇದಿಂದ ಅಂಗಡಿ ತೆಗೆದುಕೊಂಡಿದ್ದರು ಎಂದರೆ ಗೊತ್ತಿಲ್ಲ. ತಮ್ಮ ಜೊತೆ ಪ್ರಿಯಾ ಜಡಿ ಸೊಸೆ ರವರು ಚೆನ್ನಾಗಿರುತ್ತಾರೆಂದರೆ ಸಾಕ್ಷಿಯು ಇಬ್ಬರೂ ಸೊಸೆಯವರು ನನ್ನ ಜೊತೆ ಚೆನ್ನಾಗಿರುತ್ತಾರೆಂದು ನುಡಿಯುತ್ತಾರೆ. ತಾವು ಹಾಜರುಪಡಿಸಿರುವ ನಿಡಿ 15 ರಿಂದ 21 ದಾಖಲೆಗಳು ಚಂದ್ರಕಾಂತ ರವರಿಗೆ ಬಾಡಿಗೆ ಹಣವನ್ನು ತುಂಬಿದ ಬಗ್ಗೆ ತೋರಿಸುವ ರಶೀದಿಗಳು ಎಂದರೆ ಸರಿಯಲ್ಲ. ತಮ್ಮ ಅಳಿಯನಿಗೆ 10 ಲಕ್ಷ ರೂ ಹಣನ್ನು ಸಾಲವಾಗಿ ನೀಡಿದ ಬಗ್ಗೆ ಯಾವದಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿಯು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ಯಾವ ದಾಖಲೆ ಎಂದರೆ ಸಾಕ್ಷಿಯು ನನ್ನ ವಕೀಲರಿಗೆ ಗೊತ್ತು ನನಗೆ ತಿಳಿಯುವದಿಲ್ಲ ಎನ್ನುತ್ತಾರೆ. ಸಾಕ್ಷಿಗೆ ನಿಡಿ 10 ರಿಂದ 14 ರಲ್ಲಿ ತಮ್ಮ ಸಹಿ ಇರುವದಿಲ್ಲ ಎಂದರೆ ಸರಿ. ಆ ದಾಖಲೆಗಳು ಯಾರಿಗೆ ಸಂಬಂದಿಸಿದ್ದು ಎಂದರೆ ಸಾಕ್ಷಿಯು ನನ್ನ ಮಗಳಿಗೆ ಸಂಬಂದಿಸಿದ ದಾಖಲೆಗಳು ಎನ್ನುತ್ತಾರೆ. ಈ ದಾಖಲೆಗಳು ಚಂದ್ರಕಾಂತ ರವರಿಗೆ ಬಾಡಿಗೆ ಹಣವನ್ನು ತುಂಬಿದ ಬಗ್ಗೆ ತೋರಿಸುವ ದಾಖಲೆಗಳು ಎಂದರೆ ಸರಿಯಲ್ಲ. ಈ ಹಣವನ್ನು ಅವರಿಗೆ ನೀಡಿದ ಬಗ್ಗೆ ತಾವು ಯಾವದೇ ತಮ್ಮ ಖಾತೆಯ ಬ್ಯಾಂಕ ಸ್ಟೇಟಮೆಂಟನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಗೊತ್ತಾಗುವದಿಲ್ಲ ಎನ್ನುತ್ತಾರೆ. ಈ ಹಣವನ್ನು ತುಂಬಿದ ಬಗ್ಗೆ ತಮ್ಮ ಆದಾಯ ತೆರಿಗೆ ರಿಟರ್ನ್ಸನಲ್ಲಿ ಉಲ್ಲೇಖಿಸಿರುತ್ತೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ತಾವು ಯಾವದೇ ಆದಾಯ ತೆರಿಗೆ ಪಾವತಿಸಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ತಾವು ಆದಾಯ ತರಿಗೆ ತುಂಬುವ ಪೂರ್ವದಲ್ಲಿ ತಮ್ಮ ವಕೀಲರಾದ ಕಬಾಡಿ ರವರಿಗೆ ಆರ್ಥಿಕ ವರ್ಷದ ಲಾಭ ನಷ್ಟ, ಹೊಣೆಗಾರಿಕೆ ಬಗ್ಗೆ ತಿಳಿಸುತ್ತೀರಾ ಎಂದರೆ ಸಾಕ್ಷಿಯು ತಾವು ತಿಳಿಸುವದಿಲ್ಲ ಎಂದು ಅವರು ಬ್ಯಾಂಕಿನ ಬಗ್ಗೆ ಕೇಳುತ್ತಾರೆ ಆ ಬಗ್ಗೆ ಮಾಹಿತಿ ನೀಡುತ್ತೇನೆಂದು ನುಡಿಯುತ್ತಾರೆ. ನಾನು ವಕೀಲರಿಗೆ ಈ ಎಲ್ಲಾ ಮಾಹಿತಿ ನೀಡುವದಿಲ್ಲ ಬದಲಿಗೆ ಅವರೇ ಆದಾಯ ತೆರಿಗೆಯನ್ನು ತುಂಬುತ್ತಾರೆ. ತಮಗೆ ಎಷ್ಟು ಬಾಡಿಗೆ ಬರುತ್ತದೆ ಎಂದು ತೋರಿಸಲು ಯಾವದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಹಾಜರು ಪಡಿಸುತ್ತೇನೆಂದು ನುಡಿಯುತ್ತಾರೆ. ಗೃಹ ಪೈನಾನ್ಸ ಸಾಲ ಮರುಪಾವತಿಸಲು ವಾದಿ, ಅವರ ಗಂಡ ಹಾಗೂ ತಮ್ಮ ಮೊಮ್ಮಗಳು ಡಿ ಡಿ ಮುಖಾಂತರ ಹಣವನ್ನು ನೀಡಿರುತ್ತಾರೆಂದರೆ ಸಾಕ್ಷಿಯು ನಾನೇ

ತುಂಬಿರುತ್ತೇನೆಂದು ನುಡಿಯುತ್ತಾರೆ. ಗೃಹ ಪೈನಾನ್ಸಗೆ ಸಾಲದ ಹಣ ಮರುಪಾವತಿಸಲು ತಮ್ಮ ಬಳಿ ಯಾವದೇ ಆದಾಯದ ಮೂಲಗಳು ಇರಲಿಲ್ಲ ಎಂದರೆ ಸರಿಯಲ್ಲ. ತಾವು ವಾದಿ ಬಳಿ ಪಡೆದಿರುವ ಹಣವನ್ನು ಮರುಪಾವತಿಸಲು ಯಾವದೇ ಪ್ರಯತ್ನ ಮಾಡಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಕೆಗೆ ನಾನು ಸಾಲ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. 2011 ರಲ್ಲಿ ಗೃಹ ಪೈನಾನ್ಸನವರು ಮನೆಯಲ್ಲಿ ಇದ್ದಂತಹ ಅಂಗಡಿ ಮತ್ತು ಮನೆಗಳನ್ನು ಜಪ್ತ ಮಾಡಿ ಬಾಡಿಗೆದಾರರನ್ನು ಹೊರಹಾಕಿದರು ಎಂದರೆ ಸರಿ. ಸದರಿ ಪೈನಾನ್ಸನವರು ಸಾಲದ ಹಣ ಮರುಪಾವತಿಸುವವರೆಗೂ ತಮಗೆ ಕಬ್ಜಾವನ್ನು ಕೊಟ್ಟಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಹಣ ತುಂಬಿದ ನಂತರ ಅಂಗಡಿಯನ್ನು ನನ್ನ ಸ್ವಾದೀನಕ್ಕೆ ನೀಡಿರುತ್ತಾರೆ ಎನ್ನುತ್ತಾರೆ. ವಾದಿಯ ಗಂಡನ ಯಾವದೇ ಸಹಿಗಳನ್ನು ಗುರುತಿಸಲು ಆಗುವದಿಲ್ಲ. ನಿಡಿ 9 ರಲ್ಲಿರುವ ಯಾವದೇ ಸಹಿಗಳನ್ನು ನನಗೆ ಗುರುತಿಸಲು ಆಗುವದಿಲ್ಲ. ನಿಡಿ 9 ಕ್ಕೆ ಯಾರೆಲ್ಲಾ ಸಾಕ್ಷಿದಾರರೆಂದು ಸಹಿ ಮಾಡಿರುತ್ತಾರೆಂದರೆ ಸಾಕ್ಷಿಯು ನನಗೆ ಇಂಗ್ಲಿಷ ಬರದ ಕಾರಣ ಗೊತ್ತಾಗುವದಿಲ್ಲ ಎನ್ನುತ್ತಾರೆ. ನಾನು ಈ ಪ್ರಕರಣದಲ್ಲಿ ಹಾಕಿರುವ ಲಿಖಿತ ಹೇಳಿಕೆ, ಪ್ರಮಾಣ ಪತ್ರಗಳು ಆಂಗ್ಲ ಬಾಷೆಯಲ್ಲಿರುತ್ತವೆ ಎಂದರೆ ಸರಿ. ತಮ್ಮ ಮಗಳಿಗೆ, ಮೊಮ್ಮಗಳಿಗೆ ಹಾಗೂ ಅಳಿಯನಿಗೆ ಹಣ ಪಾವತಿಸಿರುವ ಬಗ್ಗೆ ಅಥವಾ ಮೇಲಿಂದ ಮೇಲೆ ಹಣ ನೀಡುತ್ತಿದ್ದ ಬಗ್ಗೆ ತಮಗೆ ಇಷ್ಟು ಆದಾಯ ಇತ್ತು ಎಂದು ತಮ್ಮ ಆದಾಯ ತೆರಿಗೆ ರಿಟರ್ನ್ಸನಲ್ಲಿ ಉಲ್ಲೇಖಿಸಿರುವದಿಲ್ಲ ಎಂದರೆ ಸರಿ. 10 ವರ್ಷದ ಹಿಂದೆ ಗೃಹ ಪೈನಾನ್ಸಗೆ ಸಾಲ ತುಂಬುವಷ್ಟು ಹಣ ತಮ್ಮ ಖಾತೆಯಲ್ಲಿ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯ ಹಾಜರುಪಡಿಸಿಲ್ಲ ಬ್ಯಾಂಕ ಪುಸ್ತಕ ಇದೆ ಎಂದು ನುಡಿಯುತ್ತಾರೆ. ಆ ದಾಖಲೆ ಪಾಸಪುಸ್ತಕ ಎಲ್ಲಿದೆ ಎಂಬುದು ಗೊತ್ತಿಲ್ಲ ಆದರೆ ಸಿಕ್ಕಿದರೆ ಹಾಜರುಪಡಿಸುತ್ತೇನೆ. ಯಾವ ಬ್ಯಾಂಕನಲ್ಲಿ ಖಾತೆ ಇತ್ತು ಎಂದರೆ ಸಾಕ್ಷಿಯು ವಿಜಯಾ ಮತ್ತು ಕೆನರಾ ಬ್ಯಾಂಕನಲ್ಲಿರುಬಹುದು ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಬ್ಯಾಂಕಗಳಲ್ಲೆ ಈಗಲೂ ಸಹ ನಾನು ವ್ಯವಹಾರ ಮಾಡುತ್ತೇನೆ. ಸುಮಾರು 32 ವರ್ಷಗಳಿಂದ ಕೆನರಾ ಬ್ಯಾಂಕ ಮತ್ತು ವಿಜಯಾ ಬ್ಯಾಂಕನಲ್ಲಿ ವ್ಯವಹಾರ ಮಾಡುತ್ತಿದ್ದೇನೆ. ತಮ್ಮ ಗಂಡ ಬದುಕಿದ್ದಾಗ ವ್ಯವಹಾರವನ್ನು ನಷ್ಟವನ್ನು ಹೊಂದಿ ಸಾಕಷ್ಟು ಜನರ ಬಳಿ ಸಾಲವನ್ನು ಪಡೆದಿದ್ದ ಕಾರಣ ತಮ್ಮ ಬಳಿಯ ಅಥವಾ ತಾವು ಹೇಳುವ ಬ್ಯಾಂಕನ ಖಾತೆಗಳಲ್ಲಿ ಹಣ ಇರಲಿಲ್ಲ ಎಂದರೆ ಸರಿಯಲ್ಲ. ತಾವು ವಾದಿಗೆ ಹಣವನ್ನು ವಾಪಸ ಮಾಡಬೇಕೆಂದು ತಿಳಿದುಕೊಂಡು ಆಕೆಗೆ ನಾನು ಹಣವನ್ನು ಸಾಲವಾಗಿ ಆಗಾಗ ಕೊಟ್ಟಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಈ ಸಂದರ್ಬದಲ್ಲಿ ವಾದಿ ಪರ ವಕೀಲರು ಕೆಲವೊಂದು ದಾಖಲೆಗಳ ಮೇಲೆ

ಸಾಕ್ಷಿಯನ್ನು ಪಾಟೀ ಸವಾಲು ಮಾಡಬೇಕೆಂದು ಹಾಗೂ ಈ ಬಗ್ಗೆ ದಾಖಲೆಯನ್ನು ಸಲ್ಲಿಸಬೇಕೆಂದು ತಿಳಿಸಿ ಮುಂದುವರೆದ ಪಾಟೀ ಸವಾಲಗೆ ಸಮಯ ಕೋರಿದ್ದು ಮುಂದುವರೆದ ಪಾಟೀ ಸವಾಲಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**